ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ , ದೇವನಹಳ್ಳಿ

ಸಿ.ಸಿ.ನಂಬರು ಃ 1342 / 2019

ಫಿರ್ಯಾದಿ ಃ ಎನ್.ಮುನಿರಾಜು

ವಿರುದ್ಧ

ಆರೋಪಿ ಃ ಎಮ್.ಬಾಸ್ಕರ್ ಶೆಟ್ಟಿ ಬಿನ್ ಲೇಟ್ ಶಿವಣ್ಣ ಶೆಟ್ಟಿ
49 ವರ್ಷ, ವಾಸ ಃ ಭಾರತಿನಗರ,
ಹುಣಸಮಾರನಹಳ್ಳಿ ಪೋಸ್ಟ್,
ಬೆಂಗಳೂರು ಉತ್ತರ ತಾಲ್ಲೂಕು

ಆಪಾದನೆ

ನೀವು ಪಿರ್ಯಾದಿದಾರರಾದ ಎನ್.ಮುನಿರಾಜುರವರು ಪರಿಚಯಸ್ತರಾಗಿದ್ದು, ನೀವು ನಿಮ್ಮ ಆರ್ಥಿಕ ಅಡಚಣೆಗಾಗಿ ಕೈಗಡವಾಗಿ ಪಿರ್ಯಾದಿದಾರರಿಂದ ರೂ.5,60,000-00 ಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ದಿನಾಂಕ 27-11-2018 ರಂದು ಚೆಕ್ಕು ನಂ.287536 ನ್ನು ರೂ.1,60,000-00, ಚೆಕ್ಕು ನಂ.287537 ನ್ನು ರೂ.2,00,000-00 ಮತ್ತು ಚೆಕ್ಕು ನಂ.287538 ನ್ನು ರೂ. 2,00,000-00ಗಳಿಗೆ, ನಿಮ್ಮ ಖಾತೆ ಇರುವ ವಿಜಯಾ ಬ್ಯಾಂಕ್, ವಿದ್ಯಾನಗರ ಶಾಖೆಯ ಚೆಕ್ಕು ನೀಡಿದ್ದು, ಸದರಿ ಚೆಕ್ಕು ನಗದೀಕರಣಕ್ಕಾಗಿ ಪಿರ್ಯಾದಿದಾರರು ಅವರ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹುಣಸಮಾರನಹಳ್ಳಿ ಶಾಖೆಯ ಮೂಲಕ ನಗದೀಕರಣಕ್ಕಾಗಿ ಸಲ್ಲಿಸಿದಾಗ ಅದು " ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ " ಎಂಬ ಕಾರಣಕ್ಕೆ ಹಿಂಬರಹದೊಂದಿಗೆ ನಗದಾಗದೇ ವಾಪಸ್ಸಾಗಿದ್ದು ನಂತರ ಪಿರ್ಯಾದಿದಾರರು ತಮಗೆ ದಿನಾಂಕ 25-02-2019 ರಂದು ನೋಟೀಸು ಕಳುಹಿಸಿದ್ದು, ಸದರಿ ನೋಟೀಸು ನಿಮಗೆ ಜಾರಿಯಾಗಿದ್ದು, ಸದರಿ ನೋಟೀಸಿಗೆ ಜವಾಬಾಗಲೀ, ಚೆಕ್ಕಿನ ಬಾಬ್ತು ಹಣವನ್ನು ನೀಡಿರುವುದಿಲ್ಲ ನೀವು ವರ್ಗಾವಣೀಯ ಲಿಖಿತ ಕಾಯ್ದೆಯ ಕಲಂ 138 ರ ರೀತ್ಯಾ ಶಿಕ್ಷಾರ್ಹ ಅಪರಾಧ ಮಾಡಿದ್ದು ನನ್ನ ಸಂಜ್ಞೆಯಲ್ಲಿದೆ.

ಆದುದರಿಂದ ಆರೋಪಿಯಾದ ನಿಮ್ಮ ವಿರುದ್ದ ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕೆಂದು ನಿರ್ದೇಶಿಸಿದ್ದೇನೆ.

ಪ್ರಶ್ನೆ-1 ಃ ಈಗ ನಿಮಗೆ ಓದಿ ಹೇಳಿ ವಿವರಿಸಿದಂತಹ ಆಪಾದನೆ ನಿಮಗೆ ಅರ್ಥವಾಗಿದೆಯೇ?

ಉತ್ತರ ಃ

ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?

ಉತ್ತರ ಃ

ದಿನಾಂಕ 22ನೇ ಅಕ್ಟೋಬರ್ ಮಾಹೇ 2019 ರಂದು

(ಯೋಗೇಶ್ವರಿ)
ಅಪರ ಸಿವಿಲ್‌ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ದೇವನಹಳ್ಳಿ.